ದುರದೃಷ್ಟವೆಂದರೆ ಈ ಮೂರು ಅಂಶಗಳಲ್ಲಿ ಯಾವುದು ಎಷ್ಟು ಪ್ರಮಾಣದಲ್ಲಿದ್ದರೆ ಕೃತಿ 'ಉತ್ತಮ' ಎನಿಸಿಕೊಳ್ಳುತ್ತದೆ ಎಂದು ತೀರ್ಮಾನಿಸಲು ಯಾವುದೇ ಅಳತೆಗೋಲಾಗಲಿ, ಮಾಪನವಾಗಲಿ ಇಲ್ಲ. ಆದರೆ ಒಂದಂತೂ ಸತ್ಯ: ಕೇವಲ ಭಾಷೆಯ ಉಪಯೋಗಕ್ಕೆ ಹಾಗೂ ಕಲಾತ್ಮಕತೆಗೆ ಮಾತ್ರ ಒತ್ತು ಕೊಟ್ಟು, ವಸ್ತು ವಿಷಯ ಮತ್ತು ಕಥಾಹಂದರದತ್ತ ಗಮನ ಹರಿಸದಿದ್ದರೆ, ಅದು ಪಾಂಡಿತ್ಯ ಪ್ರಯೋಗ ಪ್ರದರ್ಶಿಸುವ(**Academic exercise**) ಪ್ರಯತ್ನ ಮಾತ್ರವಾಗಿ ಕಂಡು, ಸಾಹಿತ್ಯಾಸಕ್ತರ ಒಳಚರ್ಚೆಗಳಿಗೆ ಮಾತ್ರ ಸೀಮಿತಗೊಳ್ಳುವ ಸಾಧ್ಯತೆಯೇ ಹೆಚ್ಚು. ಅವು ವೃತ್ತಿಪರರಿಂದ ಮೆಚ್ಚುಗೆಯನ್ನೂ, ಗೌರವವನ್ನೂ ಪಡೆಯಬಹುದಾದರೂ ವ್ಯಾಪಕ ಓದುಗವರ್ಗವನ್ನು ಮುಟ್ಟುವಲ್ಲಿ ಸಫಲವಾಗುತ್ತವೆಯೇ ಎಂಬ ಪ್ರಶ್ನೆಗೆ ದಿಟ್ಟ ಉತ್ತರ ನೀಡಲಾಗದು.

ಹೀಗಿರುವಾಗ, ಎರಡನೆಯ ಅಂಶಕ್ಕೆ ಒತ್ತು ಕೊಡುವ ನನ್ನಂತಹವರ ಕತೆ, ಕಾದಂಬರಿಗಳಲ್ಲಿ, ಕೆದಕಿ ತೆಗೆದ ವಸ್ತು ವಿಷಯಗಳನ್ನು ಓದುಗನಿಗೆ ಮುಟ್ಟಿಸುವ ಉದ್ದೇಶವೇ ಮುಖ್ಯವಾಗುವುದರಿಂದ ಪ್ರತಿ ಕಾದಂಬರಿಗೂ ಒಂದು ಹೊಸ ಶೈಲಿಯನ್ನು ಹುಡುಕುವ ಅವಶ್ಯಕತೆಯಾಗಲಿ, ಪಾತ್ರಗಳ ಪೋಷಣೆಯಲ್ಲಿ ತೊಡಗಿಕೊಳ್ಳಬೇಕಾದ ಬದ್ರಿಕ್ರಿಯೆಯೇ ಆಗಲಿ ಗೌಣವಾಗುತ್ತವೆ ಎಂದು ನನ್ನ ಅನಿಸಿಕೆ. ಹಾಗೆಂದೆ ಕೆಲವೊಮ್ಮೆ ಓದುಗರಿಗೆ ನನ್ನ ಶೈಲಿ ಪುನರಾವರ್ತಿತ ಎನಿಸಿದ್ದರೆ ಆಶ್ಚರ್ಯವೂ ಇಲ್ಲ. ಕಾದಂಬರಿಗಳಲ್ಲಿ ಉದ್ದೇಶಪೂರ್ವಕವಾಗಿ ಅಳವಡಿಸಿಕೊಂಡಿರುವ ಈ ಪುನರಾವರ್ತಿತ ಶೈಲಿಯನ್ನು ನನ್ನ ಸಣ್ಣ ಕತೆಗಳ ರಚನೆಯಲ್ಲಿ ಹೆಚ್ಚಾಗಿ ಉಪಯೋಗಿಸಿಲ್ಲ ಎನ್ನುವುದನ್ನು ಗಮನಿಸಬೇಕು. ಹಾಗೆಯೇ ಸಣ್ಣ ಕತೆಗಳಲ್ಲಿ ಪಾತ್ರಪೋಷಣೆಗೆ ಹಾಗೂ ಭಾಷೆಯ ಉಪಯೋಗಕ್ಕೂ ಗಮನ ಕೊಡಲು ಪ್ರಯತ್ನಿಸಿದ್ದೇನೆ. ಹಾಗೆಂದೆ ಕಾದಂಬರಿಗಳ ಬಗ್ಗೆ ವ್ಯಕ್ತಪಡಿಸಿರುವ ಈ 'ಏಕತಾನತೆ' ಮತ್ತು 'ಒಣ ಪಾತ್ರಗಳು' ಎಂಬ ಅಭಿಪ್ರಾಯ ನನ್ನ ಸಣ್ಣ ಕತೆಗಳಿಗೆ ಅನ್ವಯಿಸದು ಎಂದು ನನ್ನ ಅನಿಸಿಕೆ.

## ಮುಕ್ತಾಯದ ಮಾತು

ನನ್ನ ಅನುಭವದಿಂದ ಉದಯೋನ್ಮುಖ ಬರಹಗಾರರೊಂದಿಗೆ ಕೆಲವು ಸಲಹೆ ಮತ್ತು ಅಭಿಪ್ರಾಯಗಳನ್ನು ಹಂಚಿಕೊಳ್ಳ ಬಯಸುತ್ತೇನೆ. ಬರೆಯುವ ಆಶಯವಿರುವ ಯಾರೇ ಆಗಲಿ ಎಂದಿಗೂ ಎದೆಗುಂದಬಾರದು, ಯಾವುದೇ ಕಾರಣದಿಂದ ವಿಶ್ವಾಸವನ್ನು ಕಳೆದುಕೊಳ್ಳಬಾರದು. ಗಂಭೀರವಾದ ಮತ್ತು ಶ್ರದ್ಧಾಪೂರ್ವಕವಾದ ಪ್ರಯತ್ನಕ್ಕೆ ಎಂದಿಗೂ ಯಶಸ್ಸು ಸಿಗುವುದು ಖಚಿತ. ನಮ್ಮ ಪ್ರಯತ್ನಗಳಿಗೆ ಮೊದಮೊದಲು ಅಡ್ಡಿಗಳು ಎದುರಾಗುವುದು ಮತ್ತು ಹಿನ್ನಡೆ ಕಾಣುವುದು ಸಾಮಾನ್ಯ. ಆದರೆ ಮುಂದೆಂದೋ ಒಮ್ಮೆ, ಹೇಗೋ, ಯಾರಿಂದಲೋ ಪ್ರೋತ್ಸಾಹ ಸಿಗುವುದು ಖಂಡಿತ; ನಮ್ಮ ಪ್ರಯತ್ನ ಓದುಗರ ಮನ ಮುಟ್ಟುವುದೂ ಖಂಡಿತ. ಅದುವರೆಗೆ ನಮಗೆ ಸರಿ ಎನಿಸಿದ್ದನ್ನು ನಂಬಿ ನಡೆಯುವುದು ನಮಗೆ ಅಭ್ಯಾಸವಾಗಬೇಕು; ವಿಶ್ವಾಸ ಕಳೆದುಕೊಳ್ಳದೆ ಅವಕಾಶಕ್ಕಾಗಿ ಕಾಯುವ ತಾಳ್ಮೆ ರೂಢಿಸಿಕೊಳ್ಳಬೇಕು. ಅದುವರೆಗೂ ಬರೆಯುತ್ತಲೇ ಇರುವುದು ನಮ್ಮ ಕರ್ತವ್ಯವಾಗಬೇಕು.

✿